


**ಆತ:** ಈಗೀಗ ಪುಸ್ತಕ ಓದುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆಯಲ್ಲವೆ?
**ಈತ:** ಹಾಗೇನೂ ಇಲ್ಲ. ಬದಲಿಗೆ ಹಣ ಕೊಟ್ಟು ಅಭಿನಂಧನಾ ಗ್ರಂಥ ಬರೆಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ.

**ಹೆಂಡತಿ:** ರೀ ಈಗೀಗ ನಿಮ್ಮ ಬಟ್ಟೆ ಒಗೆಯಲು ಬಹಳ ಬೇಸರ.
**ಗಂಡ (ಕಳಕಳಿಯಿಂದ):** ಹಾಗಾದರೆ ವಾಷಿಂಗ್ ಮಷಿನ್ ತರಲೇ?
**ಹೆಂಡತಿ:** ಹಾಗಲ್ಲರೀ ಡಿಜಿಟಲ್ ಪೇಮೆಂಟ್ ಬಂದಾಗಿನಿಂದ ಜೇಬಲ್ಲಿ ಕಾಸೇ ಇರುವುದಿಲ್ಲ.

**ಆಕೆ:** ನೀವೂ ನಿಮ್ಮ ಯಜಮಾನರು ಮಜವಾಗಿದ್ದೀರಲ್ವಾ?
**ಈಕೆ:** ಮಜಾ ಏನು ಬಂತು ರೀ. ಬರೀ ತಲೆನೋವು.
**ಆಕೆ:** ಸೊಸೆ ಸಂಬಂಧಿಗಳ ಕಾಟವಿಲ್ಲವಲ್ಲ?
**ಈಕೆ:** ಸೊಸೆ ಸಂಬಂಧಿಗಳಿಲ್ಲದಿದ್ದರೂ ಮೊಬೈಲ್ ಅನ್ನೋ ಸವತಿ ಕಾಟ ಇಪ್ಪತ್ತನಾಲ್ಕು ಗಂಟೆ ಇದೆಯಲ್ವ.

**ಪಂಕಜಾ:** ರೀ ಪದ್ಮಾ... ನನ್ನ ಮಗ ಓಟದಾಟದಲ್ಲಿ ನಿನ್ನೆ ಗೋಲ್ಡ್ ಮೆಡಲ್ ಗೆದ್ದುಕೊಂಡು ಬಂದ.
**ಪದ್ಮಾ:** ರೀ ಪಂಕಜಾ... ನನ್ನ ಮಗ ನಿನ್ನೆ ಎಲೆಯಾಟದಲ್ಲಿ (ಇಸ್ಪಿಟ್) ನನ್ನ ಗೋಲ್ಡ್ ಚೈನ್ ಸೋತು ಬಂದ.




ಈಸೂರಿನಿಂದ ಬಂದು ಹುಡುಗಿ ನೋಡುವ ಕಾರ್ಯ ಮಾಡಿದರು ಆಸೂರಿನವರು. ಹುಡುಗನಿಗೆ ಹುಡುಗಿ ಒಪ್ಪಿಗೆಯಾದಳು. ಏನಾದರು ಕೇಳುವುದಿದ್ದರೆ ಕೇಳಿ ಎಂದರು ಗತ್ತಿನಿಂದ ಹುಡುಗನ ಕಡೆಯವರು. ಗಮ್ಮತ್ತಿನಿಂದ ಹುಡುಗಿಯದು ಒಂದೇ ಪ್ರಶ್ನೆ. ನಿಮ್ಮೂರಲ್ಲಿ ಮೊಬೈಲ್ ನೆಟ್‌ವರ್ಕ್ ಸರಿಯಾಗಿದೆಯಾ?

**ಮೂಷಿಕ (ವಿನಾಯಕ ದೇವರನ್ನು ಕುರಿತು):** ಭೂಲೋಕದಲ್ಲಿ ನೋಡಿ ಒಬ್ಬೊಬ್ಬರು ಮೂರು ಮೂರು ಗಾಡಿಗಳಿಟ್ಟುಕೊಂಡಿದ್ದಾರೆ. ನಿಮಗೆ ಮಾತ್ರ ಒಂದೇ ವಾಹನ.
**ವಿನಾಯಕ:** ಅವರು ಭೂಮಿ ಬಗೆದು ಪೆಟ್ರೋಲ್ ತೆಗಿತಾರೆ ಅದಕ್ಕೆ. ಇಂದ್ರಲೋಕದಲ್ಲಿ ಎಲ್ಲಿದೆ ಅಂತಹ ಅವಕಾಶ? ನನಗೆ ಒಂದು ಸೀಟ್ ಬೆಲ್ಟ್ ಕೂಡ ಇಲ್ಲ ಹಾಕಿಕೊಳ್ಳಲು.

**ಮದುವೆಯ ಗಂಡು:** ನಿನಗೆ ಆರಂಕಿ ಸಂಬಳ ಸಾಕಾಗುತ್ತಾ?
**ಮದುವೆಯ ಹೆಣ್ಣು:** ನನಗೆ ಸಾಕು. ಆದ್ರೆ ಖರ್ಚಿಗೆ ನೀನೇನು ಮಾಡುತ್ತೀಯಾ?

ಸಂಗ್ರಹ: ಸದ್ಯೋಜಾತ, ಅಸಗೋಡು

